ಕೃಷಿ ಮಾರುಕಟ್ಟೆ ಫೆಡರೇಷನ್‌ನಿಂದ ಈ ವರ್ಷದ ಬೆಲೆಗಳ ವಿವರಗಳನ್ನು ತಂದು ಹೇಳಿದರು. ಇದನ್ನು ಏತಕ್ಕೆ ನೆನಪು ಮಾಡುತ್ತಿದ್ದೇನೆಂದರೆ ಮುಖ್ಯಮಂತ್ರಿಗಳ ಹೇಳಿಕೆ ಪ್ರಕಾರ 1989-90ನೇ ಸಾಲಿನಲ್ಲಿ ವಸೂಲಾತಿ ಪ್ರಮಾಣ ಅಲ್ಪಾವಧಿ ಸಾಲದ್ದು ಶೇಕಡ 18.6 ಆದರೆ ಮಧ್ಯಮಾವಧಿ ಸಾಲದ ವಸೂಲಾತಿ ಪ್ರಮಾಣ ಶೇಕಡ 9.24, ದೀರ್ಘಾವಧಿ ಸಾಲದ ವಸೂಲಾತಿ ಪ್ರಮಾಣ ಶೇಕಡ 24 ಎಂದು ಹೇಳಿದ್ದಾರೆ. ಬೆಳಿಗ್ಗೆ ಬೈರೇಗೌಡರು 1989-90ರಲ್ಲಿ ರೈತ ಬೆಳೆದ ಬೆಳೆಗಳಿಗೆ ಯಾವ ಯಾವ ಬೆಲೆ ಇತ್ತು ಎಂಬ ವಿವರವನ್ನು ಕೊಟ್ಟರು. 1991-92ರಲ್ಲಿ ರೈತ ಬೆಳೆದ ಅದೇ ಬೆಳೆಗಳಿಗೆ ಏನು ಬೆಲೆಗಳು ಇದ್ದವು ಎಂಬುದನ್ನು ಹೇಳಿದರು. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ ತಾವು ಸಾಲ, ಬಡ್ಡಿ, ಸುಸ್ತಿ ಬಡ್ಡಿ ಎಲ್ಲಾ ಕಟ್ಟಿದ ಮೇಲೆ ನೀವು ಶೇಕಡಾ 5 ರಂತೆ ಬಡ್ಡಿಯನ್ನು ಉತ್ಪಾದನಾ ಉತ್ತೇಜಕ ಯೋಜನೆಯಾಗಿ ಕೊಡುತ್ತೇವೆಂದು ಹೇಳುತ್ತಿದ್ದೀರಿ. 1989-90ರ ಬೆಲೆ ಏನಿತ್ತು ಅದರ ಶೇಕಡಾ 40 ಭಾಗ ಈ ವರ್ಷ ಬೆಲೆ ಕಡಿಮೆ ಆಗಿದೆ. ಜೊತೆಗೆ ಉತ್ಪಾದನಾ ಕೂಡ ಕಡಿಮೆ ಆಗಿದೆ. ಸಬ್ಸಿಡಿ ತೆಗೆದ ಮೇಲೆ ರಸಗೊಬ್ಬರದ ಬೆಲೆ ಏರಿಕೆ ಆದಮೇಲೆ ರೈತನ ಉತ್ಪನ್ನ ಕಡಿಮೆಯಾಗಿದೆ. ಅವನು ಉತ್ಪತ್ತಿ ಮಾಡಿದ ವಸ್ತುವಿಗೆ ಬೆಲೆ ಕಡಿಮೆ ಆಗಿದೆ. ಎಂದರೆ ನಿಮ್ಮ ವಸೂಲಾತಿ ಎಷ್ಟರಮಟ್ಟಿಗೆ ಆಗಬಹುದು ಎಂದು ಸ್ವಲ್ಪ ಆಲೋಚನೆ ಮಾಡಿ. 1989-90 ಏನು ಪರ್ಸೆಂಟೇಜ್ ಆಫ್ ರಿಕವರಿ ಬಗ್ಗೆ ಹೇಳಿದ್ದೀರಿ, ಅದರ ಅರ್ಥ.....

ಶ್ರೀ ಜೆ. ಪಿ. ಮಾಧುಸ್ವಾಮಿ : (ಸದನದ ಬಾವಿಯಲ್ಲಿ ನಿಂತು) ನಯವಂಚನೆ ....

ಪ್ರೊ ಎಂ. ಡಿ. ನಂಜುಂಡಸ್ವಾಮಿ : ನಯವಂಚನೆಯ ಪ್ರಶ್ನೆ ಅಲ್ಲ. ನೀವು ನಯವಂಚನೆ ಎಂದು ಹೇಳುತ್ತೀರಿ. ನಾನು ಅವಿವೇಕಿತನ ಎಂದು ಹೇಳುತ್ತೇನೆ. ಅವಿವೇಕತನ ಎಲ್ಲಾ ಪಕ್ಷಗಳದ್ದು ಎಂದು ನಾನು ಹೇಳುತ್ತಿದ್ದೇನೆ. ನಾನೊಬ್ಬ ರೈತನಾಗಿ ಮಾತನಾಡುತ್ತಿದ್ದೇನೆ. ಇಲ್ಲಿ ನಾನು ರಾಜಕೀಯ ಮಾಡುತ್ತಾ ಇಲ್ಲ. How production is going down and how the prices are going down and how can you expect recovery of 5% of production incentive? This is a nonsensical document. You don't want to solve the problem. ದೇಶದಲ್ಲಿ ಇನ್ನೂ ಸಮಸ್ಯೆ ಹೆಚ್ಚು ಮಾಡುತ್ತೀರೋ ಹೊರತು ರೈತನಿಗೆ ನೀವೇನೂ ಬಗೆಹರಿಸುವುದಿಲ್ಲ. ಯಾರಾದರೂ ಅಷ್ಟೇ; ಸುಮ್ಮನೆ ಬಾವೀಲಿ ಹೋಗಿ ಕೂತರೂ ಅಷ್ಟೇನೇ; ವಾಕೌಟ್ ಮಾಡಿದರೂ ಅಷ್ಟೇನೇ. ಯಾವ ಅಧೋಗತಿಗೆ ಹೋಗುತ್ತಿದೆ ರೈತರ ಸ್ಥಿತಿಗತಿ ಎನ್ನುವುದನ್ನು ನೀವು ಗಂಭೀರವಾಗಿ ಆಲೋಚನೆ ಮಾಡುವ ಕ್ರಿಯೆ ಕಾಣಿಸುತ್ತಿಲ್ಲ ನಮಗೆ. ಉತ್ಪಾದನೆ ತೆಗೆದು ನೋಡಿ. Are we reaching our target this year? Have we reached our target last year? 180 ದಶಲಕ್ಷ ಟನ್‌ಗಳಷ್ಟು ಆಹಾರವನ್ನು ನಾವು ಉತ್ಪಾದನೆ ಮಾಡಬೇಕೆಂದು ಇದ್ದೇವೆ. We are not anticipating even reaching 170 million tonnes this year. What are you going to achieve in 2000 AD? What is your target? ಇಂತಹ ಅವಿವೇಕಿ ನೀತಿಗಳನ್ನು ಮಾಡಿಕೊಂಡು ನೀವು ರೈತರ